# ನಕ್ಷತ್ರ ರಾತ್ರಿಯೇ ಬರಬೇಕು!

ಸೆಲೆಬ್ರಿಟಿಗಳು ತೆರೆಗಿಂತಲೂ ಸೋಷಿಯಲ್ ಮೀಡಿಯಾದಲ್ಲಿಯೇ ಹೆಚ್ಚು ಸದ್ದುಮಾಡುತ್ತಿರುವ ಕಾಲವಿದು. ಆದರೆ ಕೋಮಲ್ ಇದಕ್ಕಿಂತ ಭಿನ್ನ. ತನ್ನನ್ನು ತಾನು ಗುಪ್ತಗಾಮಿನಿ ಎಂದು ಕರೆದುಕೊಳ್ಳುವ ಅವರು ತೆರೆಯ ಮೇಲೆ ಮಾತ್ರ ಪ್ರಕಟಗೊಳ್ಳುವವರು. ಸಖತ್ ಕಾಮಿಡಿ ಚಿತ್ರವೊಂದರ ಮೂಲಕ ಜನರನ್ನು ರಂಜಿಸಲು ಸಿದ್ಧರಾಗುತ್ತಿರುವ ಅವರ ಜೊತೆಗಿನ ಮಾತುಕತೆ ಇಲ್ಲಿದೆ.

■ ಪದ್ಮನಾಭ ಭಟ್



◆ **2015ರ ನಂತರ ನೀವು ಇದ್ದಕ್ಕಿದ್ದ ಹಾಗೆ ಮಾಯವಾಗಿ, 2019ರಲ್ಲಿ 'ಕೆಂಪೇಗೌಡ 2' ಎಂಬ ಆಕ್ಷನ್ ಸಿನಿಮಾ ಮೂಲಕ ಮತ್ತೆ ಬಂದಿರಿ. ಈ ಬ್ರೇಕ್ ಯಾಕೆ?**

'ಡೀಲ್ ರಾಜ' ಸಿನಿಮಾ ಮಾಡುವಾಗ 104 ಕೆ.ಜಿ. ಆಗಿಬಿಟ್ಟಿದ್ದೆ. ಇದರಿಂದ ಥೈರಾಯ್ಡ್ ಸಮಸ್ಯೆ ಶುರುವಾಯ್ತು. ಒಂದೂವರೆ ವರ್ಷದಲ್ಲಿ ಸುಮಾರು 20 ಕೆ.ಜಿ. ಕಮ್ಮಿಯಾದೆ. ಆಗ ನಾನು ಸಣ್ಣಗಾಗಿರುವುದನ್ನು ಮಾಧ್ಯಮದವರ ಮುಂದೆ ಹೇಳೋಣ ಎಂದು ಒಂದು ಫೋಟೊಶೂಟ್ ಮಾಡಿಸಿದೆ. ಆ ಫೋಟೊ ಒಬ್ಬ ಸ್ನೇಹಿತರಿಗೆ ಸಿಕ್ಕಿ, 'ಕೋಮಲ್ ಸಖತ್ ಸಣ್ಣ ಆಗಿದಾರೆ. ಫಿಟ್ ಆಗಿದಾರೆ. ಒಂದು ಆ್ಯಕ್ಷನ್ ಸಿನಿಮಾ ಮಾಡೋಣ' ಎಂದು ಮುಂದೆ ಬಂದರು. 'ಕೆಂಪೇಗೌಡ 2' ಸಿನಿಮಾ ಶುರುವಾಗಿದ್ದು ಹಾಗೆ. ಆ ಸಿನಿಮಾ ಸಿದ್ಧತೆಯಲ್ಲಿ ಮತ್ತೆ ಎರಡೂವರೆ ವರ್ಷ ಆಗೋಯ್ತು.

◆ **ನೀವು ಹಾಸ್ಯನಟನಾಗಿ ಪ್ರಸಿದ್ಧರಾದವರು. 'ಕೆಂಪೇಗೌಡ 2'ದಂಥ ಆ್ಯಕ್ಷನ್ ಸಿನಿಮಾ ಮಾಡಬೇಕು ಎಂದು ಯಾಕೆ ಅನಿಸಿತು?**

ಸಿನಿಮಾ ಕಥೆ ಚೆನ್ನಾಗಿಲ್ಲದಿದ್ದಾಗ, ಸಿಕ್ಸ್ ಪ್ಯಾಕ್ ನಟರ ಸಿನಿಮಾಗಳು ಪೋಸ್ಟರ್ ಕಾಸೂ ದುಡಿಯದಿರುವ ಉದಾಹರಣೆಗಳಿವೆ. ಇದು ಕಥೆ ಚೆನ್ನಾಗಿತ್ತು. ನಾವೇ ಮಾಡಿದ ಕಥೆ. ಒಂದೊಂದು ಕಾಲಘಟ್ಟಕ್ಕೆ ಒಂದೊಂದು ಕಥೆ ವರ್ಕ್ ಆಗುತ್ತಿರುತ್ತದೆ. ಇದರ ನಾಯಕ ಒಬ್ಬ ಪೊಲೀಸ್ ಇನ್‌ಸ್ಪೆಕ್ಟರ್. ಒಬ್ಬ ಇನ್‌ಸ್ಪೆಕ್ಟರ್ ಅಂದ್ರೆ ಫಿಟ್ ಆಗಿರಬೇಕು. ನನ್ನಲ್ಲಿ ಆ ಫಿಟ್‌ನೆಸ್ ಇದೆ. ಅದಕ್ಕೆ ಪೂರಕವಾಗಿ ತಯಾರಿ ಏನು ಮಾಡಬೇಕೋ ಎಲ್ಲ ತಯಾರಿಗಳನ್ನು ಮಾಡಿಕೊಂಡೆ. ಆ ಧೈರ್ಯದ ಮೇಲೇ ಸಿನಿಮಾ ಮಾಡಿದೆ.

ಈ ಮಧ್ಯದಲ್ಲಿ ಸುಮಾರು ಸಿನಿಮಾಗಳು, ರಿಯಾಲಿಟಿ ಶೋಗಳು ಎಲ್ಲ ಬಂತು. ಒಪ್ಪಿಕೊಳ್ಳಲಿಲ್ಲ. ನನ್ನ ಚಿತ್ರಬದುಕಿನಲ್ಲಿ 98 ಸಿನಿಮಾ ಮಾಡಿದ್ದೇನೆ. ಸುಮಾರು ಜನ ಈ ಅವಧಿಯಲ್ಲಿ ಐದಾರು ನೂರು ಸಿನಿಮಾ ಮಾಡಿಬಿಟ್ಟಿದ್ದಾರೆ. ನನಗೆ ಕಂಟೆಂಟ್ ಮುಖ್ಯ. ನನಗೆ ಇಷ್ಟವಾದ ಸಿನಿಮಾಗಳನ್ನು ಮಾತ್ರ ಒಪ್ಪಿಕೊಂಡಿದ್ದೇನೆ. ಹಾಗಾಗಿ ನನ್ನ ಕಾಮಿಡಿ ಸೀನ್‌ಗಳು ಎಲ್ಲ ಚಾನಲ್‌ಗಳಲ್ಲಿ ಈಗಲೂ ಬರುತ್ತಿರುತ್ತವೆ. ನಾನು 2004ರಲ್ಲಿ ಮಾಡಿದ 'ಮಿ. ಗರಗಸ'